ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-1.
ದೂ. 080-22372738 E-mail: nregs-ka@nic.in

ಕ.ಸಂ:ಗ್ರಾಅಪ 428 ಉಖಾಯೋ 2013 (ಭಾ -1) ದಿನಾಂಕ: 18-09-2013

**ಎರಡನೇ ಹಂತದ ಸ್ಯಾಟ್ ಕಾಂ ವಿಡಿಯೋ ಸಂವಾದದ ದಿನಾಂಕ: 28-09-2013ರ ಕುರಿತು**

**ಸೂಚನಾ ಪತ್ರ**

ಮಾನ್ಯರೆ,

ವಿಷಯ: ಎರಡನೇ ಹಂತದ ಸ್ಯಾಟ್ ಕಾಂ ವಿಡಿಯೋ ಸಂವಾದ ದಿನಾಂಕ: 28-09-2013 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು, ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸರ್ಕಾರದ ಕಾರ್ಯದರ್ಶಿಗಳು, ಇತರ ನಿರ್ದೇಶಕರುಗಳು, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖಾ ಕಾರ್ಯಕ್ರಮಗಳ ಕುರಿತು ಸ್ಯಾಟ್ ಕಾಂ ಮೂಲಕ ತರಬೇತಿ ನಡೆಸುವ ಕುರಿತು.

ನೂತನ ಸರ್ಕಾರ ಬಂದ ನಂತರ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆಯಲ್ಲಿ ಹಲವಾರು ಹೊಸ ಕಾರ್ಯಕ್ರಮಗಳನ್ನು ಹಾಗೂ ಚಾಲ್ತಿಯಲ್ಲಿರುವ ಯೋಜನೆಗಳನ್ನು ಜಾರಿಗೊಳಿಸುತ್ತಿರುವುದು ಸರಿಯಷ್ಟೆ. ಈ ಕುರಿತಂತೆ ಮೊದಲನೇ ಹಂತದ ಸ್ಯಾಟ್ ಕಾಂ ಕಾರ್ಯಕ್ರಮವನ್ನು ದಿನಾಂಕ: 31-08-2013ರಂದು ಆಯೋಜಿಸಲಾಗಿದ್ದು ಪ್ರಸ್ತುತ ಎರಡನೇ ಹಂತದ ಸ್ಯಾಟ್ ಕಾಂ ವಿಡಿಯೋ ಸಂವಾದ ಕಾರ್ಯಕ್ರಮವನ್ನು ದಿನಾಂಕ: 28-09-2013 ರಂದು ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪ ಕಾರ್ಯದರ್ಶಿಗಳು/ ಯೋಜನಾ ನಿರ್ದೇಶಕರುಗಳು (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ-ಖಾತರಿ ಯೋಜನೆ ನೋಡಿಕೊಳ್ಳುತ್ತಿರುವ) ಗ್ರಾಮ ಪಂಚಾಯತ್ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಸಹಾಯಕ ಅಭಿಯಂತರರು, ಕಿರಿಯ ಅಭಿಯಂತರರು ಮತ್ತು ಜಿಲ್ಲೆ ಹಾಗೂ ತಾಲ್ಲೂಕಿನ ಎಮ್.ಐ.ಎಸ್ ಸಂಯೋಜಕರು ಇವರುಗಳಿಗೆ ಸ್ಯಾಟ್ ಕಾಂ ಮೂಲಕ ಸಂವಾದ ಆಯೋಜಿಸಲಾಗಿದೆ.

ಸದರಿ ಸ್ಯಾಟ್ ಕಾಂ ಸಂವಾದದ ವಿವರಗಳು ಇಂತಿವೆ.

| ಕ್ರಸಂ | ವಿಷಯ | ವಿವರ |
|---|---|---|
| 1 | ಸ್ಯಾಟ್ ಕಾಂ ಕೇಂದ್ರ ಮೈಸೂರುನಲ್ಲಿ (ANSSIRD) ಭಾಗವಹಿಸುವವರು | 1. ಶ್ರೀ ಟಿ.ಎಂ. ವಿಜಯ ಭಾಸ್ಕರ್ ಭಾ.ಆ.ಸೇ, ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ.<br>2. ಶ್ರೀ ಮುನೀಶ್ ಮೌದ್ಗಿಲ್ ಭಾ.ಆ.ಸೇ,. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ<br>3. ಶ್ರೀ ನವೀನ್‌ರಾಜ್ ಸಿಂಗ್ ಭಾ.ಆ.ಸೇ,. ನಿರ್ದೇಶಕರು ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲೀಕರಣ ಯೋಜನೆ<br>4. ಶ್ರೀಮತಿ ಹೇಮಲತಾ ಭಾ.ಆ.ಸೇ,. ನಿರ್ದೇಶಕರು ಎನ್.ಆರ್.ಎಲ್.ಎಂ.<br>5. ಶ್ರೀ ಭುವನಹಳ್ಳಿ ನಾಗರಾಜ್, ನಿರ್ದೇಶಕರು ಸುವರ್ಣ ಗ್ರಾಮೋದಯ ಮತ್ತು ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ. |

| | | |
|---|---|---|
| | ಭಾಗವಹಿಸಬೇಕಾದವರು | [illegible] ಅಧಿಕಾರಿಗಳು (ಯಾವುದಾದರೊಂದು ತಾಲ್ಲೂಕ ಪಂಚಾಯತ್‌ನ ಸ್ಯಾಟ್ ಕಾಂ ಕೇಂದ್ರದಲ್ಲಿ ಭಾಗವಹಿಸಬಹುದು)<br>ii. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಉಪ ಕಾರ್ಯದರ್ಶಿಗಳು/ಯೋಜನಾ ನಿರ್ದೇಶಕರು (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನೋಡಿಕೊಳ್ಳುತ್ತಿರುವವರು, ಯಾವುದಾದರೊಂದು ತಾಲ್ಲೂಕ ಪಂಚಾಯತ್‌ನ ಸ್ಯಾಟ್ ಕಾಂ ಕೇಂದ್ರದಲ್ಲಿ ಭಾಗವಹಿಸಬಹುದು)<br>iii. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯ ನಿರ್ವಾಹಕ ಅಧಿಕಾರಿಗಳು.<br>ವಿ.ಸೂ: ಕಾರ್ಯ ನಿರ್ವಾಹಕ ಅಧಿಕಾರಿಗಳು ಈ ಕಾರ್ಯಕ್ರಮದ ನೋಡಲ್ ಅಧಿಕಾರಿಗಳಾಗಿ ಈ ಸ್ಯಾಟ್ ಕಾಂ ಕಾರ್ಯಕ್ರಮದಲ್ಲಿ ಭಾಗವಹಿಸಿ ಸೂಚಿಸಿದವರನ್ನು ಆಹ್ವಾನಿಸಿ ಕರೆಸಲು ಕ್ರಮ ವಹಿಸುವುದು ಆಸನಗಳ ವ್ಯವಸ್ಥೆ ಜನರೇಟರ್ ವ್ಯವಸ್ಥೆ ಸಹಿತ ಎಲ್ಲಾ ಅಗತ್ಯ ಕ್ರಮವಹಿಸುವುದು. |
| 3 | **ಕಾರ್ಯ ಕ್ರಮದ ವಿವರಗಳು** | |

| ಕ್ರಸಂ | ಸಮಯ | ವಿಷಯ | ವಿವರಗಳು |
|---|---|---|---|
| 1 | 11 ರಿಂದ 12 ಗಂಟೆಯವರೆಗೆ | • ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹೊಸ ಕಾಮಗಾರಿಗಳ ಕುರಿತು ನೀಡಿದ ಆದೇಶಗಳ ಪ್ರಸ್ತಾವನೆ<br>• ಒಗ್ಗೂಡಿಸುವಿಕೆಯಡಿ (Convergence) ಕೈಗೊಳ್ಳಬೇಕಾದ ಕಾಮಗಾರಿಗಳ ಅನುಷ್ಠಾನ ಕುರಿತು ವಿವರಣೆ<br>• 12000 ಜಿಲ್ಲಾ ಪಂಚಾಯತ್ ಕೆರೆಗಳ ಪುನಃಶ್ಚೇತನಗೊಳಿಸುವ ಕುರಿತು ವಿಷಯ ಪ್ರಸ್ತಾವನೆ<br>• 12-13ನೇ ಸಾಲಿಗೆ ಬಾಕಿ ಹಣ ಸಂದಾಯ ಹಾಗೂ ಇತರ ವಿಷಯಗಳು | • ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಿರ್ದೇಶಕರು (ಎಮ್.ಜಿ.ಎನ್.ಆರ್.ಇ.ಜಿ.ಎಸ್) ಹಾಗೂ ನಿರ್ದೇಶಕರು ಸುವರ್ಣ ಗ್ರಾಮೋದಯ ಮತ್ತು ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ. ಅವರುಗಳಿಂದ ಪವರ್ ಪಾಯಿಂಟ್ ಪ್ರೆಸ್‌ಟೇಷನ್ ಮೂಲಕ ವಿಷಯ ಮಂಡನೆ |
| 2 | 12 ರಿಂದ 12.30 | • ರಾಜ್ಯದ ಎಲ್ಲಾ 176 ತಾಲ್ಲೂಕ ಪಂಚಾಯತ್ ಸ್ಯಾಟ್ ಕಾಂ ಕೇಂದ್ರಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕುರಿತು ಪ್ರಸ್ತಾಪಿತ ವಿಷಯಗಳ ಬಗ್ಗೆ ಚರ್ಚೆ ಫ್ಯಾಕ್ಸ್ ಮೂಲಕ ಮೈಸೂರಿನ ಸ್ಯಾಟ್ ಕಾಂ ಕೇಂದ್ರಕ್ಕೆ ರವಾನೆ | • ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸ್ಯಾಟ್ ಕಾಂ ಸ್ಟುಡಿಯೋದಲ್ಲಿ ಶ್ರೀ ಶಂಕರ್‌ರವರು (ANSSIRD) ಸಂಯೋಜಕರಾಗಿ ಕೆಲಸ ನಿರ್ವಹಿಸುವರು. |
| 3 | ಮಧ್ಯಾಹ್ನ 12.30 ರಿಂದ 1.30 ಯವರೆಗೆ | • ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಫ್ಯಾಕ್ಸ್ ಮತ್ತು ಫೋನ್ ಪ್ರಶ್ನೆಗಳಿಗೆ ಉತ್ತರ ಹಾಗೂ ಸಂವಾದ | |
| 4 | ಮಧ್ಯಾಹ್ನ 1.30 ರಿಂದ 2.30 ಯವರೆಗೆ | • ಊಟದ ವಿರಾಮ | • |
| 5 | ಮಧ್ಯಾಹ್ನ 2.30 ರಿಂದ 3.00 ಯವರೆಗೆ | • ನಿರ್ಮಲ್ ಭಾರತ್ ಅಭಿಯಾನ ಹಾಗೂ ಕುಡಿಯುವ ನೀರಿನ ಯೋಜನೆಯ ಬಗ್ಗೆ ಪ್ರಸ್ತಾವನೆ | • ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು (ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲೀಕರಣ ಯೋಜನೆ) ಅವರುಗಳಿಂದ ಪವರ್ ಪಾಯಿಂಟ್ ಪ್ರೆಸ್‌ಟೇಷನ್ ಮೂಲಕ ವಿಷಯ ಮಂಡನೆ |

| | | | | |
|---|---|---|---|---|
| | 6 | ಮಧ್ಯಾಹ್ನ 3.00 ರಿಂದ 4.00 ಯವರೆಗೆ | • ರಾಜ್ಯದ ಎಲ್ಲಾ 176 ತಾಲ್ಲೂಕ ಪಂಚಾಯತ್ ಸ್ಯಾಟ್ ಕಾಂ ಕೇಂದ್ರಗಳಲ್ಲಿ ನಿರ್ಮಲ್ ಭಾರತ್ ಅಭಿಯಾನ ಹಾಗೂ ಕುಡಿಯುವ ನೀರಿನ ಯೋಜನೆಯ ಕುರಿತು ಪ್ರಸ್ತಾಪಿತ ವಿಷಯಗಳ ಬಗ್ಗೆ ಚರ್ಚೆ ಫ್ಯಾಕ್ಸ್ ಮೂಲಕ ಮೈಸೂರಿನ ಸ್ಯಾಟ್ ಕಾಂ ಕೇಂದ್ರಕ್ಕೆ ರವಾನೆ ಫ್ಯಾಕ್ಸ್ ಮತ್ತು ಫೋನ್ ಪ್ರಶ್ನೆಗಳಿಗೆ ಉತ್ತರ ಹಾಗೂ ಸಂವಾದ | • ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸ್ಯಾಟ್ ಕಾಂ ಸ್ಟುಡಿಯೋದಲ್ಲಿ ಶ್ರೀ ಶಂಕರ್‌ರವರು (ANSSIRD) ಸಂಯೋಜಕರಾಗಿ ಕೆಲಸ ನಿರ್ವಹಿಸುವರು |
| | 7 | ಸಾಯಂಕಾಲ 4.00 ರಿಂದ 4.30 ಯವರೆಗೆ | • ಎನ್.ಆರ್.ಎಲ್.ಎಮ್ ಯೋಜನೆ ಕುರಿತು ವಿಷಯ ಮಂಡನೆ | • ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು (ಎನ್.ಆರ್.ಎಲ್.ಎಮ್ ಯೋಜನೆ) ಅವರುಗಳಿಂದ ಪವರ್ ಪಾಯಿಂಟ್ ಪ್ರೆಸ್‌ಟೇಷನ್ ಮೂಲಕ ವಿಷಯ ಮಂಡನೆ |
| | 8 | ಸಾಯಂಕಾಲ 4.30 ರಿಂದ 5.30 ಯವರೆಗೆ | • ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರಿಂದ ಯೋಜನೆಗಳ ಬಗ್ಗೆ ಪ್ರಸ್ತಾಪ ಹಾಗೂ ಸಮಾರೋಪ ಭಾಷಣ | |

**ವಿಶೇಷ ಸೂಚನೆಗಳು**

1. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪ ಕಾರ್ಯದರ್ಶಿಗಳು ಹಾಗೂ ಯೋಜನಾ ನಿರ್ದೇಶಕರುಗಳು ತಮ್ಮ ಹಂತದಲ್ಲಿ ದಿನಾಂಕ: 27-09-2013 ರಂದು ಪೂರ್ವಭಾವಿ ಸಭೆ ನಡೆಸುವುದು.
2. ರಾಜ್ಯದ ಎಲ್ಲಾ ತಾಲ್ಲೂಕ ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು ನೋಡಲ್ ಅಧಿಕಾರಿಗಳಾಗಿ ಕೆಲಸ ನಿರ್ವಹಿಸುವುದು.
3. ಶ್ರೀ ಶಂಕರ್‌ರವರು (ANSSIRD) ಸ್ಯಾಟ್ ಕಾಂ ಈ ಕಾರ್ಯಕ್ರಮದ ಸಂಯೋಜಕರಾಗಿ ಕೆಲಸ ನಿರ್ವಹಿಸಲು ಕೋರಿದೆ.
4. ತಾಲ್ಲೂಕ ಮಟ್ಟದಲ್ಲಿ ಸ್ಯಾಟ್ ಕಾಂ ಕೇಂದ್ರಕ್ಕೆ ವಿದ್ಯುತ್ ಶಕ್ತಿ ಸರಬರಾಜು ನಿರಂತರವಾಗಿ ಇರುವಂತೆ ನೋಡಿಕೊಳ್ಳುವುದು ಅಗತ್ಯಬಿದ್ದಲ್ಲಿ ಜನರೇಟರನ್ನು ಅಳವಡಿಸಿಕೊಳ್ಳುವುದು.

(ಮನೀಶ್ ಮೌದ್ಗಿಲ್) 23/9/13
ಆಯುಕ್ತರು
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
2. ರಾಜ್ಯದ ಎಲ್ಲಾ ಉಪ ಕಾರ್ಯದರ್ಶಿಗಳು/ಯೋಜನಾ ನಿರ್ದೇಶಕರು(ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನೋಡಿಕೊಳ್ಳುತ್ತಿರುವರು.
3. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯ ನಿರ್ವಾಹಕ ಅಧಿಕಾರಿಗಳು.

ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ:-

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ

[illegible]
ಆಪ್ತ ಕಾರ್ಯದರ್ಶಿಗಳಿಗೆ

4. ನಿರ್ದೇಶಕರು, ಕರ್ನಾಟಕ-ಗ್ರಾಮೀಣ ನೀರು ಸರಬಾರಜು ಮತ್ತು ನೈರ್ಮಲಿಕರಣ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಾವೇರಿ ಭವನ ಬೆಂಗಳೂರು
5. ನಿರ್ದೇಶಕರು, ಎನ್.ಆರ್.ಎಲ್.ಎಂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
6. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಸಹಾಯಕರಿಗೆ
7. ನಿರ್ದೇಶಕರು, ಸುವರ್ಣ ಗ್ರಾಮೋದಯ ಮತ್ತು ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
8. ನಿರ್ದೇಶಕರು ANSSIRD ಲಲಿತ ಮಹಲ್ ರಸ್ತೆ, ಮೈಸೂರು
9. ಮುಖ್ಯಸ್ಥರು (ಹಣಕಾಸು ಮತ್ತು ಲೆಕ್ಕ ಪತ್ರ), ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು
10. ಜಂಟಿ ನಿರ್ದೇಶಕರು –1/ ಜಂಟಿ ನಿರ್ದೇಶಕರು –2 ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು
11. ಉಪ ನಿರ್ದೇಶಕರು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಬೆಂಗಳೂರು
12. ಶ್ರೀ ಶಂಕರ್ ಕಾರ್ಯಕ್ರಮದ ಸಂಯೋಜಕರು ANSSIRD ಲಲಿತ ಮಹಲ್ ರಸ್ತೆ ಮೈಸೂರು
13. ಶ್ರೀ ಶ್ರೀನಿವಾಸ್ ಮಾರಗಪ್ಪನವರ್ ಅವರಿಗೆ ಇದನ್ನು ವೆಬ್ ಸೈಟ್‌ನಲ್ಲಿ ಅಳವಡಿಸಲು ಕೋರಿದೆ.